ಪಿ. ಡಬ್ಲ್ಯೂ: 2

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾ: 03/02/2024 )

**ಮುಂದುವರೆದ ಪಾಟೀ ಸವಾಲು :41 ನೇ ಪ್ರತಿವಾದಿ ಪರ ಶ್ರೀ ಎಮ್ ಎಲ್ ಎನ್ ವಕೀಲರ ಪರವಾಗಿ ಶ್ರೀ ಜಿ ಎನ್ ಎನ್ ವಕೀಲರಿಂದ,**

ದಾವಾ ಜಮೀನಿನ ಕಾಗದ ಪತ್ರದ ವ್ಯವಹಾರಗಳನ್ನು ಮೊದಲು ಯಾರು ನೋಡಿಕೊಳ್ಳುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ನಮಗೆ ಪಾಲು ಮಾಡಿ ಕೊಟ್ಟಿರುವುದಿಲ್ಲ, ಆಗ ನಮ ಅಜ್ಜಿಯ ಕಡೆಯವರು ನೋಡಿಕೊಳ್ಳುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ದಾವಾ ಜಮೀನುಗಳು ಎಲ್ಲೇಲ್ಲಿ ಇವೆ ಎಂದು ಗೊತ್ತು. 2014ರ ದಾವೆಯಲ್ಲಿ ನನ್ನ ತಂದೆಯವರು ಅವರನ್ನು ಪಕ್ಷಗಾರರನ್ನಾಗಿ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದ್ರಿ ಅರ್ಜಿಯು ನನ್ನ ತಂದೆ ಪ್ರತಿವಾದಿಯ ಕುಟುಂಬಕ್ಕೆ ಸೇರಿದವರಲ್ಲ ಹಾಗೆ ಆತ ಆವಶ್ಯಕ ಪಕ್ಷಗಾರನಲ್ಲ ಎಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿನ ಸರ್ವೆ ನಂಬರ್ 647ಡ ದಲ್ಲಿ ಇರುವ ಜಮೀನು ಮಾರಾಟವಾದಾಗ ಖರೀದಿದಾರರ ಹೆಸರು ಆರ್ ಟಿ ಸಿ ಯಲ್ಲಿ ಬರುವ ಸಮಯದಲ್ಲಿ ತಕರಾರು ಸಲ್ಲಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಆಗ ನಮಗೆ ಗೊತ್ತಿರಲಿಲ್ಲ, ಗೊತ್ತಾದ ನಂತರ ತಕರಾರು ಸಲ್ಲಿಸಿರುತ್ತೇವೆಂದು ನುಡಿದಿರುತ್ತಾರೆ. ಸದ್ರಿ ತಕರಾರನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. 41 ನೇ ಪ್ರತಿವಾದಿಯವರು ತಾನು ಖರೀದಿ ಮಾಡಿದ ದಾವಾ ಆಸ್ತಿಯಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು ಎಂದು ಪ್ರತ್ಯೇಕ ದಾವೆ ದಾಖಲಿಸಿರುವುದಿಲ್ಲ, ಆದರೆ ಇದೇ ದಾವೆಯಲ್ಲಿ ಕೇಳಿಕೊಂಡಿರುತ್ತೇವೆ. ಪ್ರತಿವಾದಿ ಸಂಖ್ಯೆ: 22 ಮತ್ತು 23 ರವರು 41 ನೇ ಪ್ರತಿವಾದಿಗೆ ದಾವಾ ಆಸ್ದಿಯಲ್ಲಿನ 12 ನೇ ಆಸ್ತಿಯ ಪೈಕಿ 2 ಗುಂಟೆ 4 ಆಣೆ ಜಮೀನನ್ನು ಮಾರಾಟ ಮಾಡಿದ್ದು ಸದ್ರಿ ಜಮೀನಿನ ದಾಖಾಲಾತಿಯಲ್ಲಿ 41 ನೇ ಪ್ರತಿವಾದಿಯವರ ಹೆಸರು ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿ ಸಂಖ್ಯೆ: 22 ಮತ್ತು 23ರವರು ನಮ್ಮ ಕುಟುಂಬದವರು ಆಗಿರುವುದಿಲ್ಲ, ನಮ್ಮ ಊರಿನವರೂ ಅಲ್ಲ, ಅವರು ನಮಗೆ ಗೊತ್ತಿಲ್ಲದೇ ಮಾರಾಟ ಮಾಡಿರುತ್ತಾರೆಂದು ನುಡಿದಿರುತ್ತಾರೆ. 41 ನೇ ಪ್ರತಿವಾದಿಯವರು ತಾನು ಖರೀದಿ ಮಾಡಿದ ಜಮೀನಿನಲ್ಲಿ ಕಲ್ಲು ಮಣ್ಣು ತಂದು ಹಾಕಿರುತ್ತಾರೆ ಎಂದರೆ ಸರಿಯಲ್ಲ. 21 ನೇ ಪ್ರತಿವಾದಿ ಮತ್ತು 26 ರಿಂದ 39 ನೇ

ಪ್ರತಿವಾದಿಯವರಿಗೆ ಒಂದು ವೇಳೆ ಈ ದಾವೆಯಲ್ಲಿ ವಾಂಟಣೆಯಾದರೆ 41 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿದ ಜಾಗಕ್ಕಿಂತ ಹೆಚ್ಚು ಜಮೀನು ಅವರ ಪಾಲಿಗೆ ಬರುತ್ತದೆ ಎಂದರೆ ಸರಿ. 41 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿದ ಜಮೀನನ್ನು ಪ್ರತಿವಾದಿ 21 , 26 ರಿಂದ 39 ರವರ ಹಿಸ್ಸೆಗೆ ಹಾಕಲು ನನ್ನ ತಕರಾರು ಇರುತ್ತದೆ. 21 ನೇ ಪ್ರತಿವಾದಿ , 26 ರಿಂದ 39 ಹಾಗೂ ಪ್ರತಿವಾದಿ 22 ಮತ್ತು 23 ರ ನಡುವೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾಂಟಣಿ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ನಮಗೆ ಗೊತ್ತಿಲ್ಲದೇ ಮಾಡಿಕೊಂಡಿರುತ್ತಾರೆ. ನಮಗೆ ಗೊತ್ತಾದ ನಂತರ ಈ ದಾವೆ ದಾಖಲಿಸಿರುತ್ತೇವೆಂದು ನುಡಿದಿರುತ್ತಾರೆ. ಸದ್ರಿ ವಾಂಟಣಿಯ ನಂತರ ದಾವಾ ಆಸ್ತಿಯ ದಾಖಲಾತಿಗಳಲ್ಲಿ 22 ಮತ್ತು 23 ನೇ ಪ್ರತಿವಾದಿಗಳ ಹೆಸರು ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದೇ ಮಾಡಿಕೊಂಡಿರುತ್ತಾರೆಂದು ನುಡಿದಿರುತ್ತಾರೆ. 22 ಮತ್ತು 23 ನೇ ಪ್ರತಿವಾದಿಗಳ ಹೆಸರಿನಲ್ಲಿದ್ದ ದಾವಾ ಆಸ್ತಿಯ ಹಳೆ ಸರ್ವೆ ನಂಬರ್ 647 ಡ ದ 3 ಎಕರೆ 30 ಗುಂಟೆ ಜಮೀನಿನಲ್ಲಿ 2 ಗುಂಟೆ 4 ಆಣೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಆ ಬಗ್ಗೆ ನಮಗೆ ಗೊತ್ತಿರಲಿಲ್ಲವೆಂದು ನುಡಿದಿರುತ್ತಾರೆ. ತದನಂತರ ಸದ್ರಿ ಖರೀದಿ ಮಾಡಿದ ಜಮೀನಿನ ಕಬ್ಜೆಯಲ್ಲಿ 41 ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿಯಲ್ಲ. 22 ಮತ್ತು 23 ಪ್ರತಿವಾದಿಯವರಿಗೆ 41 ನೇ ಪ್ರತಿವಾದಿಯವರು ತಾವು ಖರೀದಿಸಿದ ಜಮೀನಿಗೆ ಮಾರುಕಟ್ಟೆ ಬೆಲೆಯನ್ನು ಪಾವತಿ ಮಾಡಿ ಆಸ್ತಿ ಖರೀದಿ ಮಾಡಿರುತ್ತಾರೆ ಎಂದರೆ ನಮಗೆ ಗೊತ್ತಿಲ್ಲದೆ ಮಾಡಿರುತ್ತಾರೆ. ಸದ್ರಿ ಖರೀದಿ ಮಾಡಿರುವ ವಿಚಾರ 2007 ನೇ ಇಸವಿಯಲ್ಲಿ ನನ್ನ ತಂದೆ ಮತ್ತು ನನಗೆ ಗೊತ್ತಿದ್ದರೂ ಸಹ ಈಗ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. 22 ಮತ್ತು 23 ನೇ ಪ್ರತಿವಾದಿಗಳ ಕಬ್ಜೆಯಲ್ಲಿದ್ದ ಜಮೀನನ್ನು 41 ನೇ ಪ್ರತಿವಾದಿಯವರು ಖರೀದಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ದೊಡ್ಡಬಳಸೆ ಊರಿನಲ್ಲಿ ಹುಟ್ಟಿ ಬೆಳೆದಿರುತ್ತೇನೆ. ನನ್ನ ಮನೆಯಿಂದ ಸರ್ವೆ ನಂಬರ್ 647 ಡ ದಲ್ಲಿ ಇರುವ ಆಸ್ತಿಯು ಒಂದುವರೆ ಕಿಮಿ ದೂರದಲ್ಲಿದೆ. 2007 ನೇ ಇಸವಿಯಲ್ಲಿ 41 ನೇ ಪ್ರತಿವಾದಿಯವರು ಖರೀದಿ ಮಾಡಿದ ವಿಚಾರ ಗೊತ್ತಿದ್ದು, ಹಾಗೆ ಅವರು ಕಬ್ಜೆಯಲ್ಲಿರುವ ವಿಷಯ ಗೊತ್ತಿದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದು ನಾನು ಕೇಳಿದಂತೆ ದಾವೆಯ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಪಿ. ಡಬ್ಲ್ಯೂಃ 2**

**ಪಾಟೀ ಸವಾಲು :32 ನೇ ಪ್ರತಿವಾದಿ ಪರ ಶ್ರೀ ವಿ ಎಪ್ ಜಿ ವಕೀಲರಿಂದ,**

ಬೈಲೂರು ಗ್ರಾಮದ ಮ್ಯುಟೇಶನ್ ಎಂಟ್ರಿ ನಂಬರ್ 9311 ನ್ನು ಪ್ರಶ್ನಿಸಿ ಸಂಬಂಧಪಟ್ಟ ಪ್ರಾಧಿಕಾರದಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ. ಹಾಗಾಗಿ ಈ ಪ್ರಸ್ತುತ ದಾವೆಯಲ್ಲಿ ಕೇಳಿದಂತಹ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ**

**ಪ್ರಧಾನ ಸಿವಿಲ್ ಜಡ್ಜ್, ಭಟ್ಕಳ.**